ದಿನಾಂಕ **: 03.07.2025** ರಂದು ಪಿಡಬ್ಲ್ಯೂ - 1 ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

<u>ಪಾಟೀ ಸವಾಲುಃ</u> ಶ್ರೀ ಕೆ.ಎನ್.ಹೆಚ್., 12 ನೇ ಪ್ರತಿವಾದಿ ಪರ ವಕೀಲರಿಂದಃ

ಚಂದು ನಾಯ್ಕ್ ಎಂದರೆ ನನ್ನ ಅಜ್ಜ. ಅವರು ಸುಮಾರು 60 ವರ್ಷದ ಹಿಂದೆ ಮರಣ ಹೊಂದಿದ್ದಾರೆ. ಅವರ ಹೆಣ್ಣು ಮಕ್ಕಳು ಎಂದರೆ ವನಜ ಮತ್ತು ಬಿಜಿಲು ಆಗಿರುತ್ತಾರೆ. ಅವರಿಬ್ಬರ ಮದುವೆ ನನ್ನ ಅಜ್ಜನ ಜೀವಿತ ಕಾಲದಲ್ಲಿ ಆಗಿರುತ್ತದೆ. ನನ್ನ ತಾಯಿಯ ಹೆಸರು ವನಜ. ನನ್ನ ತಾಯಿಗೆ ಮದುವೆಯಾಗಿ ಎಷ್ಟು ವರ್ಷ ಆಗಿದೆ ಎಂದು ನನಗೆ ಗೊತ್ತಿಲ್ಲ. ನನಗೆ ಈಗ 57 ವರ್ಷ. ನಾವು ಪರಿಶಿಷ್ಟ ಪಂಗಡದ ಬುಡಕಟ್ಟು ಜನಾಂಗದವರು. ನಾವು ಮಕ್ಕಳಕಟ್ಟು ಆಚರಣೆ ಮಾಡುತ್ತೇವೆ. ಹೆಣ್ಣು ಮಕ್ಕಳಿಗೆ ಮದುವೆ ಮಾಡಿದ ತಕ್ಷಣ ಗೋತ್ರ ಕಡಿದು ಕೊಡುತ್ತೇವೆ ಎಂದರೆ ಸರಿ. ನಮ್ಮಲ್ಲಿ ಬಂದು ಹೋಗಿ ಮಾಡುತ್ತಿರುತ್ತಾರೆ. ನಮ್ಮಲ್ಲಿ "ಬಳಿ" (ತುಳುವಿನಲ್ಲಿ ಬರಿ ಎಂದು ಕರೆಯುತ್ತಾರೆ) ಸಂಪ್ರದಾಯ ಇದೆ. ಹೆಣ್ಣು ಮಕ್ಕಳಿಗೆ ಹುಟ್ಟಿದ ಹೆಣ್ಣು ಮಕ್ಕಳಿಗೆ ಗಂಡನ "ಬಳಿ" ಬರುತ್ತದೆ ಎಂದರೆ ಸರಿ. ನಮ್ಮ ಜಾತಿ ಸಂಪ್ರದಾಯದ ಪ್ರಕಾರ ಗೋಂದುಳು, ಗದ್ದುಗೆ ಪೂಜೆ ಇರುತ್ತದೆ. ನಮಗೆ ಗೋಂದುಳು ಕುಣಿಯುವ ಸಂಪ್ರದಾಯ ಇರುತ್ತದೆ. ಅಂದರೆ ದೇವಿಯನ್ನು ತಲೆಯ ಮೇಲೆ ಇಟ್ಟು ನರ್ತನ ಮಾಡುವ

ಸಂಪ್ರದಾಯ ಇರುತ್ತದೆ ಎಂದರೆ ಸರಿಯಲ್ಲ. ದೇವಿಯನ್ನು ಕೆಳಗೆ ಇಟ್ಟು ಪೂಜೆ ಮಾಡುವ ಸಂಪ್ರದಾಯ ಇರುತ್ತದೆ. ಸದರಿ ಸಂಪ್ರದಾಯ ದೇವಿ ನಲ್ಕೆ ಆಗುವಂತಹ ಸ್ಥಳಗಳಲ್ಲಿ ಹೋಗಿ ನಾವು ಪೂಜೆ ಮಾಡುತ್ತೇವೆ. ಸದರಿ ಪೂಜೆಗೆ ಗಂಡಸರು ಮಾತ್ರ ಹೋಗುತ್ತಾರೆ. ಹೆಣ್ಣು ಮಕ್ಕಳು ಹೋಗುವುದಿಲ್ಲ. ಮದುವೆಯಾಗಿ ಬಂದಂತಹ ಹೆಣ್ಣು ಮಕ್ಕಳು ಪ್ರಾರ್ಥನೆ ಮಾತ್ರ ಮಾಡುತ್ತಾರೆ.

ನನ್ನ ತಾಯಿಯನ್ನು ಸೂಡ ಗ್ರಾಮದ ಹುಡುಗನಿಗೆ ಮದುವೆ ಮಾಡಿಕೊಟ್ಟಿದ್ದಾರೆ. ನನ್ನ ತಾಯಿಗೆ ನಾನು ಸೇರಿ ಒಟ್ಟು 5 ಜನ ಮಕ್ಕಳಿದ್ದು, ಅದರಲ್ಲಿ 3 ಹೆಣ್ಣು ಮತ್ತು ಇಬ್ಬರು ಗಂಡು ಮಕ್ಕಳಿದ್ದೇವೆ. ನಾನು ಮತ್ತು ನನ್ನ ಸಹೋದರ ಸಹೋದರಿಯರು ಹುಟ್ಟಿ ಬೆಳೆದದ್ದು ಸೂಡ ಗ್ರಾಮದಲ್ಲಿ ಎಕದರೆ ಸರಿಯಲ್ಲ. ನಮ್ಮ ಅಜ್ಜನ ಮನೆ ಕುಂಟಾಡಿ ದಾವಾ ಸ್ವತ್ತಿನಲ್ಲಿ. ನಾನು ಮತ್ತು ನನ್ನ ಸಹೋದರ ಸಹೋದರಿಯರು ಸೂಡ ಗ್ರಾಮದ ಕಾಪಿಕಾಡಿನಲ್ಲಿ ಶಾಲೆಗೆ ಹೋಗಿದ್ದೇವೆ. ನಾನು 7 ನೇ ತರಗತಿವರೆಗೆ ಓದಿದ್ದು, ನನ್ನ ಅಕ್ಕ 2 ನೇ ತರಗತಿವರೆಗೆ, ತಮ್ಮ 5 ನೇ ತರಗತಿ ವರೆಗೆ ಮತ್ತು ನನ್ನ ತಂಗಿ ಕಲಾವತಿ 9 ನೇ ತರಗತಿ ಓದಿದ್ದಾರೆ. ಸೂಡ ಗ್ರಾಮದ ಮನೆಯನ್ನು ಪಾಲು ಮನೆ ಎಂದು ಕರೆಯುತ್ತಾರೆ. ನನ್ನ ತಂದೆ, ತಾಯಿ ಮತ್ತು ನನ್ನ ಸಹೋದರ ಸಹೋದರಿಯರ ಪಡಿತರ ಚೀಟಿ, ಗುರುತಿನ ಚೀಟಿ ಎಲ್ಲವೂ ಸಹಾ ಸೂಡ ಗ್ರಾಮದ ವಿಳಾಸ ಹೊಂದಿದೆ. ನಾನು ಮತ್ತು ನನ್ನ ಸಹೋದರ ಸಹೋದರಿಯರು ನನ್ನ ಅಜ್ಜನ

ಮನೆ ದಾವಾ ಸ್ವತ್ತಿನಲ್ಲಿ ಹುಟ್ಟಿ ಬೆಳೆದಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ನನ್ನ ಸಹೋದರ ಸಹೋದರಿಯರ ಜನನ ಪ್ರಮಾಣ ಪತ್ರ ಇದೆಯೇ ಎಂದರೆ, ನನ್ನ ತಂಗಿಯ ಜನನ ಪ್ರಮಾಣ ಪತ್ರವಿದ್ದು, ನನ್ನದಿರುವುದಿಲ್ಲ. ನನ್ನ ತಂಗಿಯ ಜನನ ಪ್ರಮಾಣ ಪತ್ರ ಲಭ್ಯವಾದಲ್ಲಿ ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. ನನ್ನ ತಾಯಿ , ನಾನು ಮತ್ತು ನನ್ನ ಸಹೋದರ ಸಹೋದರಿಯರು ಶಾಶ್ವತವಾಗಿ ಸೂಡ ಗ್ರಾಮದಲ್ಲಿ ವಾಸವಾಗಿದ್ದೇವೆ ಎಂದರೆ ಸರಿ. ಆದರೆ ಅಜ್ಜನ ಮನೆಗೆ ಹೋಗಿ ಬರುತ್ತಿರುತ್ತೇವೆ. ನಾನಾಗಲೀ, ನನ್ನ ಸಹೋದರ ಸಹೋದರಿಯರಾಗಲೀ ಅಥವಾ ನನ್ನ ತಾಯಿಯಾಗಲೀ ನನ್ನ ಅಜ್ಜನ ಮನೆಗೆ ಹೋಗಿ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ.

ನನ್ನ ತಾಯಿಯನ್ನು ಮದುವೆ ಮಾಡಿಕೊಡುವ ಸಮಯದಲ್ಲಿ ನಮ್ಮ ಜಾತಿ ಸಂಪ್ರದಾಯದ ಪ್ರಕಾರ ಸಂಪೂರ್ಣ ಸಂಬಂಧವನ್ನು ಕಡಿದು ಮದುವೆ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಬಿಜಿಲು ಎಂದರೆ ನನ್ನ ಚಿಕ್ಕಮ್ಮ. ಬಿಜಿಲು ರವರ ಗಂಡನ ಮನೆ ಮಂಗಳೂರು ತಾಲೂಕಿನ ಬೆಳುವಾಯಿ ಗ್ರಾಮವಾಗಿರುತ್ತದೆ. ಅವರಿಗೆ ಮದುವೆಯಾಗಿ ಎಷ್ಟು ವರ್ಷ ಆಗಿದೆ ಎಂದು ನನಗೆ ತಿಳಿದಿಲ್ಲ. ಬಿಜಿಲುರವರಿಗೆ ಮೂರು ಗಂಡು, ಎರಡು ಹೆಣ್ಣು ಮಕ್ಕಳಿದ್ದು, ಅವರು 19 ರಿಂದ 22 ನೇ ಪ್ರತಿವಾದಿಯರಾಗಿರುತ್ತಾರೆ. ಬಿಜಿಲುವಿನ ಮಕ್ಕಳು ಶಾಲೆಗೆ ಹೋಗಿದ್ದಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಅವರ ಆಧಾರ್

ಕಾರ್ಡ್, ಮತದಾರರ ಗುರುತಿನ ಚೀಟಿಯಲ್ಲಿನ ವಿಳಾಸಗಳು ಬೆಳುವಾಯಿ ಗ್ರಾಮದಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ. ಬಿಜಿಲುವಿನ ಗಂಡನ ಹೆಸರು ನನಗೆ ಈಗ ನೆನಪಿಲ್ಲ. ಬಿಜಿಲು ಮತ್ತು ಅವರ ಗಂಡ ಮತ್ತು ಮಕ್ಕಳು ಬೆಳುವಾಯಿಯಲ್ಲೇ ಶಾಶ್ವತವಾಗಿ ವಾಸವಾಗಿದ್ದಾರೆ ಎಂದರೆ ಸರಿಯಲ್ಲ. ಅವರು ದಾವಾ ಸ್ವತ್ತಿಗೆ ಹೋಗಿ ಬಂದು ಮಾಡುತ್ತಾರೆ. ಬಿಜಿಲುರವರಿಗೆ ಮದುವೆ ಮಾಡುವ ಸಮಯದಲ್ಲಿ ಅವರ ಗೋತ್ರ ಕಡಿದು ಮದುವೆ ಮಾಡಿಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅವರಿಗೆ ಮದುವೆಯಾದ ಸಮಯದಲ್ಲಿ ನಾನು ಚಿಕ್ಕ ಮಗುವಾಗಿದ್ದೆನಾ ಎಂದರೆ, ಆ ಸಮಯದಲ್ಲಿ ನಾನು ಜನಿಸಿರುವುದಿಲ್ಲ.

ದಾವಾ ಸ್ವತ್ತು ಭೂ ಸುಧಾರಣೆಯಿಂದ ಬಂದಂತಹ ಗೇಣಿ ಸ್ವತ್ತು ಎಂದರೆ ಸರಿ. ದಿಃ 01.03.1974 ರಂದು ಭೂ ಸುಧಾರಣ ತಿದ್ದುಪಡಿ ಕಾನೂನು ಬಂದಿರುವ ವಿಚಾರ ನನಗೆ ತಿಳಿದಿಲ್ಲ. ನನ್ನ ತಾಯಿ ಮತ್ತು ಚಿಕ್ಕಮ್ಮ ರವರಿಗೆ ಭೂ ಸುಧಾರಣಾ ತಿದ್ದುಪಡಿ ಕಾಯ್ದೆ ಬರುವ ಪೂರ್ವದಲ್ಲಿ ಮದುವೆಯಾಗಿರುತ್ತದೆ ಎಂದರೆ ಸರಿಯಲ್ಲ. ದಿಃ 01.03.1974 ರಿಂದ ದಾವಾ ಸ್ವತ್ತಿನಿಂದ ನನ್ನ ತಾಯಿ ಮತ್ತು ನನ್ನ ಚಿಕ್ಕಮ್ಮನನ್ನು ಮದುವೆ ಮಾಡಿ ಕೊಟ್ಟು ಹೊರಹಾಕಿದ್ದಾರೆ ಎಂದರೆ ಸರಿಯಲ್ಲ. ನನ್ನ ತಾಯಿಗಾಗಲೀ ಅಥವಾ ನನ್ನ ಚಿಕ್ಕಮ್ಮನಿಗಾಗಲೀ ಅಥವಾ ಅವರ ಮಕ್ಕಳಿಗಾಗಲೀ ದಾವಾ ಸ್ವತ್ತಿನಲ್ಲಿ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

ಚಲ್ಲು ನಾಯ್ಕು ಎಂದರೆ ನನ್ನ ಅಜ್ಜನ ಚಿಕ್ಕ ಮಗ ಅಂದರೆ ನನ್ನ ತಾಯಿಯ ಸಹೋದರ. ಬಾಬು ನಾಯ್ಕು ಎಂದರೆ ನನ್ನ ತಾಯಿಯ ದೊಡ್ಡ ಸಹೋದರ. ಚಲ್ಲು ನಾಯ್ಕು ಮತ್ತು ಬಾಬು ನಾಯ್ಕು ರವರು ದಿಃ 11.04.1990 ರಂದು ದಾವಾ ಸ್ವತ್ತನ್ನು ವಿಭಾಗ ಮಾಡಿಕೊಂಡ ವಿಚಾರ ನನಗೆ ತಿಳಿದಿಲ್ಲ. ದಿಃ 29.12.2017 ರಂದು ಚಲ್ಲು ನಾಯ್ಕು ರವರ ಹೆಂಡತಿ ಮತ್ತು ಮಕ್ಕಳು ಅವರ ಇನ್ನೊಬ್ಬ ಸಹೋದರ ವಿಠಲ ನಾಯ್ಕ್ ಅಂದರೆ 2 ನೇ ಪ್ರತಿವಾದಿಗೆ ದಾವಾ ಸ್ವತ್ತಿನಲ್ಲಿನ ತಮ್ಮ ಹಕ್ಕನ್ನು ಬಿಟ್ಟು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯಂತೆ ನಾನು ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿದ್ದು, ಅದರಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

Sd/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ.,
ಕಾರ್ಕಳ.